ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

**ಸಂಖ್ಯೆ : ಸಂಖ್ಯೆ : ಸಿ5(2)ಪವ್ಯ.ಬ.12/2019–20** ದಿನಾಂಕ:**07–11–2019**

**ಅಧಿಸೂಚನೆ**

ವಿಷಯ :– ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧೀಕ್ಷಕರುಗಳಿಗೆ ಪತ್ರಾಂಕಿತ ವ್ಯವಸ್ಥಾಪಕರು / ಸಹಾಯಕ ನಿರ್ದೇಶಕರು (ಬೋಧಕೇತರ)ಹುದ್ದೆಗೆ ಪದೋನ್ನತಿ ನೀಡಿರುವುದನ್ನು ಮುಂದೂಡಲು ಅವಕಾಶ ಕಲ್ಪಿಸಿರುವ ಬಗ್ಗೆ.

ಉಲ್ಲೇಖ :– ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 12 ಎಸ್‌ಡಿಇ 2005 ದ: 29–01–2008.

2 :– ಸರ್ಕಾರದ ಆದೇಶ ಸಂಖ್ಯೆ : ಇಡಿ 464 ಡಿಪಿಐ 2008 ದಿ : 06–01–2009.

3 :– ದಿನಾಂಕ : 09–10–2019 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭಾ ನಡವಳಿಗಳು.

4:– ಈ ಕಛೇರಿಯ ಅಧಿಸೂಚನೆ ಸಂಖ್ಯೆ;ಸಿ5[2] ಪವ್ಯಬ.12/2019–20ದಿನಾಂಕ:16–10–2019 ಮತ್ತು 02–11–2019.

5:– ನೌಕರರಿಂದ ಬಂದ ಮನವಿಗಳು.

6:– ಸರ್ಕಾರದ ಪತ್ರದ ಸಂಖ್ಯೆ: ಡಿಪಿಎಆರ್ 57 ಎಸ್‌ಆರ್‌ಆರ್ 2001 ದಿನಾಂಕ: 22–05–2002.

* * * * * *

**ಪ್ರಸ್ತಾವನೆ:–**

ಬೆಂಗಳೂರು ಆಯುಕ್ತಾಲಯದ ಆಡಳಿತ ವ್ಯಾಪ್ತಿಯಲ್ಲಿ ಬರುವ ಪತ್ರಾಂಕಿತ ವ್ಯವಸ್ಥಾಪಕರ / ಸಹಾಯಕ ನಿರ್ದೇಶಕರು (ಬೋಧಕೇತರ) ಹುದ್ದೆಗಳಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ಅಧೀಕ್ಷಕರ ಹುದ್ದೆಯಿಂದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಂತೆ ಸ್ಥಾನಪನ್ನ ಬಡ್ತಿಯನ್ನು ನೀಡುವ ಸಲುವಾಗಿ ದಿನಾಂಕ : 09–10–2019 ರಂದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಇಲಾಖಾ ಮುಂಬಡ್ತಿಯ ಸಭೆಯನ್ನು ನಡೆಸಲಾಯಿತು.

ಉಲ್ಲೇಖ [4] ರಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್ 'ಸಿ' ವೃಂದದ ವೇತನ ಶ್ರೇಣಿ ರೂ. 37900–70850 ರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧೀಕ್ಷಕರುಗಳಿಗೆ ಗ್ರೂಪ್ 'ಬಿ' ವೃಂದದ ವೇತನ ಶ್ರೇಣಿ ರೂ. 40900–78200 ರ ಪತ್ರಾಂಕಿತ ವ್ಯವಸ್ಥಾಪಕರು/ಸಹಾಯಕ ನಿರ್ದೇಶಕರು (ಬೋಧಕೇತರ) ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿಯನ್ನು ನೀಡಿ ಆದೇಶಿಸಲಾಗಿತ್ತು.

ಉಲ್ಲೇಖ [4] ರಂತೆ ಬಡ್ತಿ ನೀಡಲಾದ ನೌಕರರು ಬಡ್ತಿಯನ್ನು ಹೊಂದಲು ಇಚ್ಚಿಸದಿದ್ದರೆ, ಬಡ್ತಿ ಆದೇಶ ಹೊರಡಿಸಿದ ದಿನಾಂಕದಿಂದ 15 ದಿನಗಳ ಒಳಗೆ ನೀಡಲಾದ ಬಡ್ತಿಯನ್ನು ಕರ್ನಾಟಕ ಸಿವಿಲ್ ಸೇವಾ [ಸಾಮಾನ್ಯ ನೌಕರಿ ಭರ್ತಿ] ನಿಯಮಗಳು–1977ರ ನಿಯಮ 4ಎ ರಂತೆ ಬಿಟ್ಟುಕೊಡಲು ನೇಮಕ ಪ್ರಾಧಿಕಾರ ಅನುಮತಿಯನ್ನು ಕೋರಿ ಲಿಖಿತ ಕೋರಿಕೆ ಸಲ್ಲಿಸಲು ತಿಳಿಸಿ, ದಿನಾಂಕ:30–10–2019 ರವರೆಗೆ ಮತ್ತು 05–11–2019 ಅವಕಾಶವನ್ನು ನೀಡಲಾಗಿತ್ತು.

ದಿನಾಂಕ:16–10–2019 ರ ಅಧಿಸೂಚನೆಯಲ್ಲಿ ನೀಡಿರುವ 64 ಮಂದಿ ನೌಕರರಲ್ಲಿ ಒಟ್ಟು 12 ಮಂದಿ ನೌಕರರು ಮತ್ತು ದಿನಾಂಕ: 02–11–2019 ರ ಅಧಿಸೂಚನೆಯಲ್ಲಿ ಬಡ್ತಿ ನೀಡಿರುವ 19 ಮಂದಿ ನೌಕರರಲ್ಲಿ 04 ಮಂದಿ ನೌಕರರು ಸೇರಿದಂತೆ ಒಟ್ಟಾರೆ 16 ಅಧಿಕಾರಿಗಳು ಉಲ್ಲೇಖ [5] ರಲ್ಲಿ ಬಡ್ತಿಯನ್ನು ಕರ್ನಾಟಕ ಸಿವಿಲ್ ಸೇವಾ [ಸಾಮಾನ್ಯ ನೌಕರಿ ಭರ್ತಿ] ನಿಯಮಗಳು–1977ರ ನಿಯಮ 4ಎ ರಂತೆ ಬಿಟ್ಟುಕೊಡಲು ಮನವಿಗಳನ್ನು

ಸಲ್ಲಿಸಿರುತ್ತಾರೆ. ಇವರ ಮನವಿಗಳನ್ನು ಪರಿಶೀಲಿಸಿ, ಪತ್ರಾಂಕಿತ ವ್ಯವಸ್ಥಾಪಕರ/ಸಹಾಯಕ ನಿರ್ದೇಶಕರು [ಬೋಧಕೇತರ] ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿಯನ್ನು ಬಿಟ್ಟುಕೊಡಲು ಸಲ್ಲಿಸಿರುವ ಮನವಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್57ಎಸ್.ಆರ್.ಆರ್.2001 ದಿನಾಂಕ: 22–05–2002 ಮತ್ತು ಕರ್ನಾಟಕ ಸಿವಿಲ್ ಸೇವಾ [ಸಾಮಾನ್ಯ ನೌಕರಿ ಭರ್ತಿ] ನಿಯಮಗಳು–1977ರ ನಿಯಮ 4ಎ ರನ್ವಯ ಅಂಗೀಕರಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

**ಆದೇಶ:–**

ಈ ಕೆಳಕಂಡ ಅಧೀಕ್ಷಕರುಗಳು, ಪತ್ರಾಂಕಿತ ವ್ಯವಸ್ಥಾಪಕರ/ಸಹಾಯಕ ನಿರ್ದೇಶಕರು [ಬೋಧಕೇತರ] ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿಯನ್ನು ಬಿಟ್ಟುಕೊಡಲು ಕೋರಿರುವುದನ್ನು ಪರಿಗಣಿಸಿ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್57ಎಸ್.ಆರ್.ಆರ್.2001 ದಿನಾಂಕ:22–05–2002 ಮತ್ತು ಕರ್ನಾಟಕ ಸಿವಿಲ್ ಸೇವಾ [ಸಾಮಾನ್ಯ ನೌಕರಿ ಭರ್ತಿ] ನಿಯಮಗಳು–1977ರ ನಿಯಮ 4ಎ ರನ್ವಯ ಅಂಗೀಕರಿಸಿ ಅನುಮತಿಸಿದೆ.

| **ಕ್ರಮ ಸಂಖ್ಯೆ** | **ಜೇಷ್ಠತಾ ಸಂಖ್ಯೆ** | **ಬಡ್ತಿ ಹೊಂದಿದ ನೌಕರರ ಹೆಸರು/ಪದನಾಮ/ಕಛೇರಿ ಹೆಸರು ಶ್ರೀ / ಶ್ರೀಮತಿ** |
|---|---|---|
| 01 | 267 | ಪುಷ್ಪಲತಾ, ಅಧೀಕ್ಷಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6 ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು. |
| 02 | 298 | ಪಿ.ಎಂ. ನಿರ್ಮಲ, ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ. |
| 03 | 300 | ಪಿ. ಶೋಭಾದೇವಿ, ಅಧೀಕ್ಷಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6 ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು |
| 04 | 302 | ಬಿ.ಎನ್. ಹೇಮಲತಾ, ಅಧೀಕ್ಷಕರು, ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರು ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು |
| 05 | 304 | ಪಿ.ಎಂ. ಶ್ರೀಶೈಲಮೂರ್ತಿ, ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಉತ್ತರ ವಲಯ–1, ರಾಜಾಜಿನಗರ, 2ನೇ ಹಂತ, ಪಿ&ಟಿ ರಸ್ತೆ, ಬೆಂಗಳೂರು–10 |
| 06 | 321 | ಹೆಚ್.ಸಿ. ಶಿವಣ್ಣ, ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಡ್ಯ ಜಿಲ್ಲೆ, ಮಂಡ್ಯ. |
| 07 | 326 | ಡಿ.ಎಸ್. ಸಂಪತ್ ಕುಮಾರ್, ಅಧೀಕ್ಷಕರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು |
| 08 | 327 | ಡಿ.ಟಿ. ಮೀನಾಕುಮಾರಿ, ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಉತ್ತರ ವಲಯ–3 ಕೆ.ಕಾಮರಾಜರಸ್ತೆ, ಶಿವಾಜಿನಗರ, ಬೆಂಗಳೂರು–42 |
| 09 | 359 | ಪಿ. ಲತಾ, ಅಧೀಕ್ಷಕರು, ಕರ್ನಾಟಕ ಶಿಕ್ಷಕರ ಕಲ್ಯಾಣ ನಿಧಿ ಕಛೇರಿ, ಕೆ.ಜಿ ರಸ್ತೆ, ಬೆಂಗಳೂರು |
| 10 | 360 | ಉಮೇಶ, ಅಧೀಕ್ಷಕರು, ಸರ್ಕಾರಿ ವಿಭಾಗೀಯ ಪಠ್ಯ ಪುಸ್ತಕ ಮಳಿಗೆ, ಬೊಮ್ಮನಹಳ್ಳಿ, ಹೊಸೂರು ರಸ್ತೆ, ಬೆಂಗಳೂರು |
| 11 | 367 | ಕೆ.ಹೆಚ್.ಚಂದ್ರಿಕಾರಾಣಿ, ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ,ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ |

| | | |
|---|---|---|
| 12 | 387 | ಲಕ್ಷ್ಮಮ್ಮ.ಎಂ. ಅಧೀಕ್ಷಕರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು |
| 13 | 388 | ಬಿ.ಬಸವರಾಜಪ್ಪ, ಅಧೀಕ್ಷಕರು,ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,ಶಿಕಾರಿಪುರ ತಲ್ಲೂಕು, ಶಿವಮೊಗ್ಗ ಜಿಲ್ಲೆ. |
| 14 | 395 | ಎನ್. ವಿನಯ್‌ಕುಮಾರ್, ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,ಮಂಡ್ಯ ಜಿಲ್ಲೆ, ಮಂಡ್ಯ |
| 15 | 400 | ಎಸ್ ವಿ.ಪ್ರಸನ್ನ, ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,ಉಡುಪಿ ಜಿಲ್ಲೆ, ಉಡುಪಿ |
| 16 | 430 | ಎಲ್.ನಿಂಗಾನಾಯ್ಕ, ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ಜಿಲ್ಲೆ, |

ಬಡ್ತಿಯನ್ನು ಬಿಟ್ಟುಕೊಟ್ಟಿರುವ ಅಧಿಕಾರಿಗಳು ಒಂದು ವರ್ಷ ಅಥವಾ ಮುಂದಿನ ಬಡ್ತಿ ಪ್ರಕ್ರಿಯೆ ಇವುಗಳಲ್ಲಿ ಯಾವುದು ನಂತರವೋ ಅಲ್ಲಿಯವರೆವಿಗೆ ಬಡ್ತಿಗೆ ಅರ್ಹರಿರುವುದಿಲ್ಲ. **ಸಂಬಂಧಿಸಿದ ಕಛೇರಿ ಮುಖ್ಯಸ್ಥರು ಈ ಕುರಿತು ತಪ್ಪದೇ ಸೇವಾ ಪುಸ್ತಕದಲ್ಲಿ ನಮೂದಿಸಲು ತಿಳಿಸಿದೆ.**

8/11/19

**(ಡಾ॥ಕೆ.ಜಿ.ಜಗದೀಶ]**
**ಆಯುಕ್ತರು**

ಇವರಿಗೆ:

1) ಸಂಬಂಧಿಸಿದ ಕಛೇರಿ ಮುಖ್ಯಸ್ಥರಿಗೆ,
2) ಸಂಬಂಧಿಸಿದ ನೌಕರರಿಗೆ,
3) ಈ ಕಛೇರಿಯ ಎಲ್ಲಾ ಶಾಖಾಧಿಕಾರಿಗಳಿಗೆ,
4) ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ-ಈ ಜ್ಞಾಪನಾವನ್ನು ಇಲಾಖಾ ವೆಬ್ಸೈಟ್-**www.schooleducation.kar.in** "ನಲ್ಲಿ ಪ್ರಕಟಿಸಲು ಸೂಚಿಸಿದೆ.
5) ಕಛೇರಿ ಪ್ರತಿ.